
ಕಲ್ಪನೆ ಕಾವ್ಯ

# ಸವಾರ

ಮುರುಕು ಏಣಿಯಾ ಸರ್ರನೆ ಏರಿ
ಬಂದು ಕೂತಳು ಗೆಳತಿ ಗೌರಿ
ಅಂತೆ ಕಂತೆಗಳ ಬುತ್ತಿ ತೆರೆದು
ಪಕ್ಕ ಕೂರಿಸಿಕೊಂಡಳು ನನ್ನ ಕರೆದು

ಬಣ್ಣದ ಇಟ್ಟಿಗೆಗಳ ಬಳಿ
ಹೊರಬಿದ್ದ ಅಕ್ಷರಗಳು ಉಪ್ಪುಪ್ಪು
ವಿಷಯಗಳು ಸಪ್ಪೆ, ದನಿ ಖಾರ
ಬರೀ ಇದೇ ಸಮಾಚಾರ
ಪಾತ್ರೆ ಪಗಡೆಯೊಂದಿಗೆ ಕುಳಿತ
ಅಂಕಪ್ಪನ ಮಡದಿ ಚಾರಿ
ಗೋಡೆಗೆ ಅಂಟಿಕೊಂಡಿರುವನಲ್ಲ
ಯಾರೀ ಗಡ್ಡಧಾರಿ?

ಪುನಃ ನಾಳಿಗೆ ಹಿಡಿಯಬೇಕು



ಗಾರ್ಮೆಂಟ್ಸ್ ದಾರಿ
ಎಲ್ಲಿ ಹೋಗಿ ನಿಲ್ಲುವುದೋ
ಬದುಕಿನ ಸವಾರಿ

**ಯಶಸ್ವಿನಿ ಎಂ.ಎನ್.**

# ಮುಗಿಯದ ಮನೆವಾರ್ತೆ

ಮುರುಕು ಮನೆಯೊಂದರಲದೋ
ಮುಗಿಯದ ಮನೆವಾರ್ತೆ
ಮೇಲಗೋಡೆ ಬಳಿಯಲದೋ
ಅದೇ ಮನೆಮನೆ ವಾರ್ತೆ

ಬಾಳನೌಕೆ ಸಾಗಲದೋ
ದುಡಿಯಬೇಕು ಒಬ್ಬರು
ನಲಿವು ನೋವು ತೋಡಲದೋ
ಬೇಕು ಮತ್ತೂ ಇಬ್ಬರು

ಕಾಯ ಮುಗಿಸಿ ಕರವ ತೊಳೆವ
ಕಷ್ಟಜೀವಿ ಒಂದೆಡೆ
ಮಾತ ಸುರಿಸಿ ಮನಸ ತೊಳೆವ
ಸ್ನೇಹಜೀವಿ ಒಂದೆಡೆ

ಕತ್ತೆ ತಾನು ದುಡಿಯಲಿಕ್ಕೆ
ನವಿಲು ತಾನು ಕುಣಿಯಲಿಕ್ಕೆ
ಕೆಲವು ಜೀವ ಹೆಣಗಲಿಕ್ಕೆ
ಇನ್ನೂ ಕೆಲವು ಹರಟಲಿಕ್ಕೆ

ದಿವಿಜ ಲಿಖಿತ ಪಥ್ಯವಿದೋ
ಕಣ ಕಣವಿದು ತಥ್ಯವಿದೋ
ಅವನ ರೀತಿಯಂತೆ ಬದುಕು
ಪಥ್ಯವೋ

ಮುನಿಸು ತೋರಿಸಲೇನು ಮನವ
ಮುದುಡಿಸಲೇನು
ಲೋಕ ನಿಂದಿಸಲೇನು ಸಹನೆ ತಾ ಕಳೆದು
ಪರದೆ ಜಾರುವವರೆಗೂ ಪಯಣ
ತಾ ಸಾಗುವುದು
ನಡುವೆ ನಿಲಿಸಲು ಬಹುದೇ
ನಮ್ಮೂರ ಬಂಡಿವೊಲು?

**ಗುರುರಾಜ ಹ. ನಾಯಕ**